**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**

**SC No**.198/2021

**PW**. 1

**CW**. 1

**ಸಾಕ್ಷಿಯ ಹೆಸರು –ಸಚೀನ್**

**ತಂದೆಯ ಹೆಸರು –ಸಣ್ಣಸ್ವಾಮಿ**

**ವಯಸ್ಸು –25 ವರ್ಷಗಳು** ದಿನಾಂಕ 29-01-2025 ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ –ಚಾಲಕ**

**ವಾಸಸ್ಥಳ –ಐಲಾಪುರ ಗ್ರಾಮ , ಪಿರಿಯಾಪಟ್ಟಣ ತಾಃ**

**ಮುಖ್ಯ ವಿಚಾರಣೆಃ– ಸರ್ಕಾರಿ ಅಭಿಯೋಜಕರಿಂದಃ–**

ಚಾಸಾ–2 ಮತ್ತು 3 ನನ್ನ ಮಾವನ ಮಕ್ಕಳು. ಚಾಸಾ–4 ನನ್ನ ಚಿಕ್ಕಪ್ಪ. ಆರೋಪಿತರೆಲ್ಲರೂ ಗೊತ್ತು. ಅವರೆಲ್ಲರೂ ಎಮ್ಮಿಗೆ ಕಾಲೋನಿ ವಾಸಿಗಳು. ಈಗ್ಗೆ 5 ವರ್ಷಗಳ ಹಿಂದೆ ಒಂದು ದಿನ ಚಾಸಾ–2 ಮತ್ತು 3 ರವರ ಮನೆಯ ಮುಂದೆ 1 ಮತ್ತು 2 ನೇ ಆರೋಪಿತರು ದ್ವಿಚಕ್ರ ವಾಹನವನ್ನು ಉಪಯೋಗಿಸಿ , ವಿಲಿಂಗ್ ಚಾಲನೆ ಮಾಡುತ್ತಿದ್ದು , ಅದಕ್ಕೆ ಚಾಸಾ–2 ಮತ್ತು 3 ರವರು ದನಕರುಗಳು ಇದ್ದಾವೆ , ವಿಲಿಂಗ್ ಮಾಡಬೇಡಿ ಎಂದು ಹೇಳಿದರು. ಆದಾದ ಒಂದು ವಾರದ ನಂತರ ನಾನು ಚಾಸಾ–2 ಮತ್ತು 3 ರವರೊಂದಿಗೆ ದೇವರಾಜ ಕಾಲೋನಿ ಗೇಟ್ ಬಳಿ ನಿಂತಿರುವಾಗ , ಎಲ್ಲ ಆರೋಪಿತರು ಆಟೋದಲ್ಲಿ ಅಲ್ಲಿಗೆ ಬಂದು ಚಾಸಾ–2 ಮತ್ತು 3 ರವರ ಜೊತೆ ಜಗಳ ಮಾಡಿ , ವಿಲಿಂಗ್ ಮಾಡುವುದನ್ನು ಕೇಳಲು ನೀನ್ಯಾರು ಎಂದು , ಕೈಯಿಂದ ಚಾಸಾ–2 ಮತ್ತು 3 ರವರಿಗೆ ಹೊಡೆದರು. ನಾನು ಕೇಳಲು ಹೋದಾಗ , 1 ನೇ ಆರೋಪಿ ನನ್ನನ್ನು ಕೊಲೆ ಮಾಡುವ ಉದ್ದೇಶದಿಂದ ತನ್ನ ಬಳಿ ಇದ್ದ ಗುದ್ದಲಿಯಿಂದ ನನ್ನ ತಲೆಯ ಹಿಂಭಾಗದ ಬಲಭಾಗಕ್ಕೆ ಹೊಡೆದು ರಕ್ತಗಾಯ ಮಾಡಿದ.

ನಂತರ ಚಾಸಾ–4 ರವರ ನನ್ನನ್ನು ಹುಣಸೂರು ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದರು. ನಂತರ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ ಆರ್ ಆಸ್ಪತ್ರೆಗೆ ದಾಖಲಾಗಿರುತ್ತೇನೆ. ಮರುದಿನ ನಾನು ಪೊಲೀಸರಿಗೆ ಬಂದು ದೂರು ನೀಡಿರುತ್ತೇನೆ. ಸದರಿ ದೂರನ್ನು ಈಗ ನೋಡುತ್ತಿದ್ದು, ನಿಪಿ–1 ಎಂದು ಸಾಕ್ಷಿಯ ಸಹಿಯನ್ನು ನಿಪಿ–1(ಎ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಕೋವಿಡ್ ಪ್ರಕರಣ ಇದ್ದ ಕಾರಣ 4 ದಿನಗಳಿಗೊಮ್ಮೆ 10–15 ಬಾರಿ ಆಸ್ಪತ್ರೆಗೆ ಹೋಗಿರುತ್ತೇನೆ. 1 ನೇ ಆರೋಪಿ ಹೊಡೆದ ಗುದ್ದಲಿಯನ್ನು ನೋಡಿ ಗುರುತಿಸುತ್ತೇನೆ. ಸದರಿ ಗುದ್ದಲಿಯನ್ನು ಈಗ ನ್ಯಾಯಾಲಯದ ಮುಂದೆ ನೋಡುತ್ತಿದ್ದು , ಅದನ್ನು ಮು.ಮಾ1 ಎಂದು ಗುರುತಿಸಲಾಯಿತು. ಮತ್ತೊಂದು ದಿನ ಪೊಲೀಸ್ ಠಾಣೆಗೆ ಹೋಗಿ ಆರೋಪಿತರ ವಿರುದ್ಧ ಮತ್ತೊಂದು ದೂರು ನೀಡಿದ್ದೇನೆ. ಅದನ್ನು ಈಗ ನೋಡುತ್ತಿದ್ದು, ನಿಪಿ–2 ಎಂದು ಸಾಕ್ಷಿಯ ಸಹಿಯನ್ನು ನಿಪಿ–2(ಎ) ಎಂದು ಗುರುತಿಸಲಾಯಿತು. ನನ್ನ ತಲೆಗೆ ಆದ ಗಾಯದಿಂದ ನನ್ನ ರಕ್ತ ನಾನು ಧರಿಸಿದ ಬಟ್ಟೆಗೂ ಆಗಿತ್ತು.

**ಪಾಟೀಸವಾಲುಃ– ಆರೋಪಿತರ ಪರ ಶ್ರೀ ಎಂ ಆರ್ ಹೆಚ್ ವಕೀಲರಿಂದಃ–**

ಆರೋಪಿತರ ಪರ ವಕೀಲರ ಕೋರಿಕೆಯ ಮೇಲೆ ರೂ.500/– ವೆಚ್ಚದೊಂದಿಗೆ ಪಾಟೀಸವಾಲನ್ನು ಮುಂದೂಡಲಾಯಿತು.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.